INDIAN JOURNAL OF HISTORY AND ARCHAEOLOGY
ISSN (e):2582-225X
Vol-4, Issue -3, September-October, 2022,
PageNo,34-39
Peer Reviewed Journal, Referred Journal

# ದೇಶಿ ಕೃಷಿಕ ಪುಟ್ಟಯ್ಯ ಅವರ ಜೀವನ ಮತ್ತು ಸಾಧನೆ

* ರಶ್ಮಿತ ಎಲ್.ಆರ್.[1]

** *ಪ್ರೊ.ಎಂ.ನಂಜಯ್ಯ, ಹೊಂಗನೂರು.*[2]

ಭಾರತದ ಬಹುತೇಕ ರೈತರದು ಮೌನ ಸಂಸ್ಕೃತಿ ಪರಂಪರೆಯನ್ನು ನೆಚ್ಚಿಕೊಂಡು ಬಂದ ಅನಕ್ಷರಸ್ಥ ರೈತರು ಬರಹದ ಅರಿವಿಲ್ಲದೆ ಬದುಕುವುದೇ ದೊಡ್ಡದು ಎಂದು ತಿಳಿದು ಬಾಳಿದವರು. ಮೌಖಿಕ ಪರಂಪರೆಯ ಕೃಷಿ ಸಂಸ್ಕೃತಿಯ ಕುರಿತು ನಮ್ಮಲ್ಲಿ ಚಾರಿತ್ರಿಕ ದಾಖಲೆಗಳು ಅಷ್ಟಾಗಿ ಇಲ್ಲ. ಅತಿವೃಷ್ಟಿ, ಅನಾವೃಷ್ಟಿಯಂತಹ ಪ್ರಕೃತಿ ವೈಪರಿತ್ಯಗಳನ್ನು ಎದುರಿಸಿ ಪ್ರಾಣಿ, ಕೀಟಗಳ ಹಾವಳಿಗಳಿಂದ ಪಾರಾಗಿ ಬೆಳೆ ಬೆಳೆದು ಆಹಾರ ಭದ್ರತೆಯನ್ನು ಒದಗಿಸಿಕೊಟ್ಟಿರುವ ಶ್ರಮಿಕ ಸಂಸ್ಕೃತಿಯ ರೈತರ ಬಗ್ಗೆ ಚಾರಿತ್ರಿಕ ದಾಖಲೆ ಇಲ್ಲದಿರುವುದು ದುರಂತ. ರೈತರ ಬದುಕು ಕೂಡ ಮಾನವ ಸಂಸ್ಕೃತಿಯನ್ನು ಕಟ್ಟಿಕೊಡಬಲ್ಲದಾಗಿದೆ.

'ವ್ಯವಸಾಯ ಮನೆ ಮಂದಿ ಮಕ್ಕೆಳೆಲ್ಲಾ ಸಾಯ' ಎನ್ನುವಂತಹ ಕಾಲದಲ್ಲಿ ಪುಟ್ಟಯ್ಯ ಅವರು ಪಾರಂಪರಿಕ ಕೃಷಿ ಪದ್ಧತಿಯನ್ನು ಅಳವಡಿಸಿಕೊಂಡು ಬಂದಿರುವುದು ಎಲ್ಲರಿಗೂ ಆಸಕ್ತಿಯನ್ನು ಕೆರಳಿಸುತ್ತದೆ. ಇದರಲ್ಲೇ ತೃಪ್ತಿ, ನೆಮ್ಮದಿ ಕಂಡಿರುವ ಮೌಲ್ಯ ನಮ್ಮನ್ನು ಗಾಢವಾದ ಆಶ್ಚರ್ಯಗಳಿಗೆ ಒಡ್ಡುತ್ತದೆ. ಆ ನೆಮ್ಮದಿಯ ಮೌಲ್ಯಕ್ಕೆ ಸಂಪ್ರದಾಯಾಚರಣೆಗಳ ಬೆಂಬಲವೂ ಇದೆ. ನಾವು ಇವರನ್ನು ಅನ್ನದಾತ ಎಂದರೆ, ಇವರು ಭೂಮಿಯನ್ನು ಅನ್ನದಾತೆ ಎಂದು ಕರೆಯುತ್ತಾರೆ. ಸಂಸ್ಕೃತಿಯೊಳಗೆ ಬದುಕುತ್ತಿರುವ ನಾವು ಆಧುನಿಕತೆಯ ಕೊಳ್ಳು–ಬಾಕ ವ್ಯವಸ್ಥೆಗೆ ಸಿಕ್ಕಿ ಸಂಸ್ಕೃತಿಯನ್ನು ಹೀನಗೊಳಿಸುತ್ತಿದ್ದೇವೆ. ಇಂತಹದರ ನಡುವೆ ಸಂಸ್ಕೃತಿಮುಖಿಯಾಗಿ ಬದುಕುವವರು ವಿರಳ. ಪುಟ್ಟಯ್ಯ ಅವರು ಪಾರಂಪರಿಕವಾಗಿ ಬಂದ ಕೃಷಿ ಸಂಸ್ಕೃತಿಯನ್ನೇ ಉಸಿರಾಡುತ್ತಿದ್ದಾರೆ. ಬಿತ್ತುವುದರಿಂದ ಕೊಯ್ಲಿನವರೆವಿಗೂ ಮತ್ತು ನಂತರದಲ್ಲಿ ಆಹಾರ ಪದಾರ್ಥಗಳನ್ನು ಸಂರಕ್ಷಿಸಿಡುವವರೆಗೂ ದೇಶಿ ಕೃಷಿ

[1].ಸಂಶೋಧಕರು, ಕನ್ನಡ ವಿಭಾಗ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

[2] .ಪ್ರಾಧ್ಯಾಪಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

ಸಂಸ್ಕೃತಿಯನ್ನು ಅಳವಡಿಸಿಕೊಂಡು, ಅವಿಭಕ್ತ ಕುಟುಂಬದೊಡನೆ ಬದುಕು ಕಟ್ಟಿಕೊಂಡು ಸಾರ್ಥಕ ಜೀವನ ನಡೆಸುತ್ತಿದ್ದಾರೆ.

ನೇಗಿಲಯೋಗಿ ಪುಟ್ಟಯ್ಯ ಅವರು ಮೈಸೂರು ಜಿಲ್ಲೆಯ ಹೆಗ್ಗಡದೇವನಕೋಟೆ ತಾಲ್ಲೂಕಿನ ಮಾಲಾರ ಕಾಲೋನಿ ಗ್ರಾಮದವರು. ಜೀತಗಾರ ಕರಿಯಯ್ಯ ಮತ್ತು ಚಿಕ್ಕಣ್ಣಮ್ಮ ದಂಪತಿಗಳಿಗೆ ೧೯೪೮ ರಲ್ಲಿ ಮಗನಾಗಿ ಜನಿಸಿದರು. ಪುಟ್ಟಯ್ಯ ಅವರು ಜೀತಗಾರ ಕುಟುಂಬದಲ್ಲಿ ಜನಿಸಿ ಬಾಲ್ಯದಲ್ಲೇ ಸಾಕಷ್ಟು ಕಷ್ಟ ಅನುಭವಿಸಿ ಏಳನೆಯ ತರಗತಿಯವರೆಗೆ ಶಿಕ್ಷಣ ಪಡೆದಿದ್ದಾರೆ. ಮೂಲತಃ ಇವರು ಹೆಗ್ಗಡದೇವನಕೋಟೆಯ ಕೆ. ಬೆಳತ್ತೂರು ಗ್ರಾಮದವರು. ಈ ಗ್ರಾಮದಲ್ಲಿ ಬಹುತೇಕರು ಸ್ವಂತ ಜಮೀನು ಇಲ್ಲದೇ ಉಳ್ಳವರ ಜಮೀನಿನಲ್ಲಿ ಕೂಲಿ ಕೆಲಸ ಮತ್ತು ಜೀತಗಾರರಾಗಿ ದುಡಿಯುತ್ತಿದ್ದರು. ಇನ್ನೂ ಕೆಲವರು ಜಾನುವಾರುಗಳನ್ನು ಸಾಕಾಣಿಕೆ ಮಾಡಿ ಬದುಕುತ್ತಿದ್ದರು. ಜಾನುವಾರುಗಳಿಗೆ ಮೇವು ಸಿಗದೆ ಇದ್ದಾಗ ಮೇವಿಗಾಗಿ ಊರಿನ ಅಕ್ಕ-ಪಕ್ಕದ ಗ್ರಾಮದ ಕಡೆ ತೆರಳುತ್ತಿದ್ದರು. ಬಳೆಗಾರರು ತೊರೆದು ಹೋಗಿದ್ದ ಮಲಾರ ಎಂಬ ವಿಶಾಲ ಭೂ ಪ್ರದೇಶ ಇವರಿಗೆ ದೊರೆಯಿತು. ಆಹಾರ ಸಾಮಾಗ್ರಿಗಳ ಜೊತೆ ಜಾನುವಾರುಗಳನ್ನು ಮೇಯಿಸಲು ವಾರಗಟ್ಟಲೆ ಇವರುಗಳು ಮಲಾರದಲ್ಲೇ ಇರುತ್ತಿದ್ದರು. ಇಷ್ಟಕ್ಕೆ ತೃಪ್ತರಾಗದ ಇವರು ಆ ಪ್ರದೇಶದಲ್ಲಿದ್ದ ಮರ, ಗಿಡ, ಮುಳ್ಳುಗಳನ್ನು ಕತ್ತರಿಸಿ ವ್ಯವಸಾಯ ಮಾಡಲು ಯೋಗ್ಯಭೂಮಿಯನ್ನಾಗಿ ಪರಿವರ್ತಿಸಿದರು. ಕೆ.ಬೆಳತ್ತೂರು ಗ್ರಾಮದಲ್ಲಿದ್ದ ಬಹುತೇಕ ಜಮೀನು ರಹಿತ ಕುಟುಂಬದವರು ಮತ್ತು ಪುಟ್ಟಯ್ಯ ಅವರ ಕುಟುಂಬದವರು ಸಹ ಮಲಾರ ಪ್ರದೇಶಕ್ಕೆ ಬಂದು ಕೃಷಿಯಲ್ಲಿ ತೊಡಗಿಸಿಕೊಂಡರು. ಜೀತ ವಿಮುಕ್ತರಾಗಿದ್ದ ಇವರುಗಳಿಗೆಲ್ಲಾ ೧೯೫೦ ರಲ್ಲಿ ಸರ್ಕಾರ ಕೃಷಿ ಜಮೀನನ್ನು ಮಂಜೂರು ಮಾಡಿತು. ಆಗ ಪುಟ್ಟಯ್ಯ ಅವರ ಕುಟುಂಬಕ್ಕೆ ನಾಲ್ಕು ಎಕರೆ ಜಮೀನು ದೊರೆಯಿತು. ಇದನ್ನೇ ನೆಚ್ಚಿಕೊಂಡು ಕೃಷಿಯಲ್ಲಿ ತೊಡಗಿಸಿಕೊಂಡು, ಜಾನುವಾರುಗಳನ್ನು ಸಾಕುತ್ತಾ ಜೀವನ ಸಾಗಿಸುತ್ತಿದ್ದಾಗ ಮತ್ತೆ ೧೯೫೭ ರಲ್ಲಿ ಇವರ ಅಣ್ಣನ ಹೆಸರಿಗೆ ನಾಲ್ಕು ಎಕರೆ ದರ್ಖಾಸು ಭೂಮಿ ಸರ್ಕಾರದಿಂದ ದೊರೆಯಿತು. 'ಮಣ್ಣನ್ನು ನಂಬಿ ಕೆಟ್ಟವರಿಲ್ಲ' ಎನ್ನುವಂತೆ ಒಟ್ಟು ಎಂಟು ಎಕರೆ ಜಮೀನಿನಲ್ಲಿ ವ್ಯವಸಾಯ ಮಾಡತೊಡಗಿದರು. ಬಾಲಕರಾಗಿದ್ದ ಪುಟ್ಟಯ್ಯ ಅವರು ೭ನೇ ತರಗತಿಗೆ ವಿದ್ಯಾಭ್ಯಾಸ ನಿಲ್ಲಿಸಿ ತಂದೆ ಮತ್ತು ಅಣ್ಣಂದಿರ ಕೃಷಿ ಕಾಯಕಕ್ಕೆ ಬೆನ್ನೆಲುಬಾಗಿ ನಿಂತರು.

ಪುಟ್ಟಯ್ಯ ಅವರ ಕುಟುಂಬದವರು ವ್ಯವಸಾಯದಲ್ಲಿ ತೊಡಗಿಸಿಕೊಂಡಿದ್ದಾಗ ೧೯೬೬ ರಲ್ಲಿ ಬರಗಾಲ ಬಂದಿತ್ತು. ಆಗ ಕೆಂಪು ಜೋಳವನ್ನು ಬೇಯಿಸಿಕೊಂಡು ತಿಂದಿದ್ದಾರೆ. ಮತ್ತೊಮ್ಮೆ ೧೯೭೬ ರಲ್ಲಿ ಭೀಕರ ಬರಗಾಲ ಬಂದಾಗ ಮಳೆ ಇಲ್ಲದೆ ಬೆಳೆಯು ಇಲ್ಲದಾಯಿತು. ನೀರಿರುವ ಜಾಗಗಳಲ್ಲಿ ಬೆಳೆಯುತ್ತಿದ್ದ ಸೊಪ್ಪನ್ನು ಬೇಯಿಸಿ ತಿಂದು ಬದುಕಿದ್ದಾರೆ. ಇವರಿಗೆ ಎಂತಹ ಕಷ್ಟವೆಂದರೆ ಆ ಸೊಪ್ಪನ್ನು

ಬೇಯಿಸಲು ಉಪ್ಪನ್ನು ಕೊಂಡುಕೊಳ್ಳದೆ ಇರುವಷ್ಟು. ಆ ಸಂದರ್ಭದಲ್ಲಿಯೂ ಎದೆಗುಂದದೆ ಸ್ವಾಭಿಮಾನದಿಂದ ಬದುಕಿದ್ದಾರೆ. ಬರಗಾಲ ಅದೇ ರೀತಿ ಮುಂದುವರೆದಾಗ ಪುಟ್ಟಯ್ಯ ಅವರು ಸುಮ್ಮನೆ ಕೂರಲಿಲ್ಲ. ತಮ್ಮ ಕುಟುಂಬದವರೊಂದಿಗೆ, ಊರಲ್ಲಿದ್ದ ಬಾವಿಯ ನೀರನ್ನೇ ಉಪಯೋಗಿಸಿಕೊಂಡು ಟಮೋಟೋ ಹಾಗೂ ಹೂ ಮತ್ತು ತರಕಾರಿಗಳನ್ನು ಬೆಳೆದರು. ಭೂಮಿ ಇವರನ್ನು ಕೈ ಬಿಡಲಿಲ್ಲ. ಒಳ್ಳೆಯ ಫಲ ಕೊಟ್ಟಿತು, ಲಾಭವು ಬಂದಿತು. ಕೃಷಿಯಿಂದ ನೆಮ್ಮದಿ ಜೀವನ ಕಟ್ಟಿಕೊಂಡಿದ್ದಾರೆ. ಪ್ರಸ್ತುತದಲ್ಲಿ ಸರ್ಕಾರ ಕೃಷಿಗಾಗಿ ಹಲವು ಯೋಜನೆಗಳನ್ನು ಜಾರಿಗೆ ತಂದಿದೆ. ಆದರೆ ಹಿಂದೆ ಸರ್ಕಾರದ ಕೆಲವು ಕೃಷಿ ಯೋಜನೆಗಳಿದ್ದರೂ ರೈತರು ಅದನ್ನು ಸದುಪಯೋಗಪಡಿಸಿಕೊಳ್ಳುವುದು ಬಹಳ ವಿರಳವಾಗಿತ್ತು. ಏಕೆಂದರೆ ಪಟ್ಟಣಕ್ಕೆ ಬರುವ ರೈತರೇ ಕಡಿಮೆಯಾಗಿದ್ದರು. ಭೂಮಿಯಾಯ್ತು ಅವರಾಯ್ತು ಎನ್ನುವ ಮಟ್ಟಿಗೆ ಕೃಷಿಯಲ್ಲಿ ತೊಡಗಿಸಿಕೊಳ್ಳುತ್ತಿದ್ದರು. ಆದರೆ ಈಗ ಬಹುತೇಕ ರೈತರು ಒಂದೇ ಬೆಳೆಗೆ ಸೀಮಿತವಾಗಿ ಬ್ಯಾಂಕಿನಲ್ಲಿ ಸಾಲ ಪಡೆದು ಸ್ವಲ್ಪ ಭೂಮಿಗೆ ಹಾಕಿ ಇನ್ನೂ ಸ್ವಲ್ಪ ಹಣವನ್ನು ಇನ್ನಿತರ ಖರ್ಚಿಗೆ ಬಳಸಿಕೊಂಡು ಸಂಕಷ್ಟಕ್ಕೆ ಸಿಲುಕುತ್ತಿದ್ದಾರೆ. ಪುಟ್ಟಯ್ಯ ಅವರು ಮಾತ್ರ ಇದಕ್ಕೆ ವಿರುದ್ಧವಾಗಿ ಬ್ಯಾಂಕಿನಿಂದ ಒಂದೇ ಒಂದು ರೂಪಾಯಿ ಸಾಲ ಪಡೆಯದೇ ಸಮಗ್ರ ಕೃಷಿ ಪದ್ಧತಿಯನ್ನು ಅಳವಡಿಸಿಕೊಂಡು ತಮ್ಮ ಬದುಕನ್ನು ಹಸನು ಮಾಡಿಕೊಂಡು ಇತರೆ ರೈತರಿಗೆ ಮಾದರಿಯಾಗಿದ್ದಾರೆ.

ಪುಟ್ಟಯ್ಯ ಅವರಿಗೆ ನಾಲ್ವರು ಸಹೋದರರು ಇದ್ದಾರೆ. ಇವರ ಕುಟುಂಬದ ಸದಸ್ಯರ ಸಂಖ್ಯೆ ನಲ್ವತ್ತು. ಎಲ್ಲರೂ ಒಟ್ಟಾಗಿ ಇರುವ ಅವಿಭಕ್ತ ಕುಟುಂಬ ಇವರದು. ಹನ್ನೆರಡು ಗಂಡು ಮಕ್ಕಳು ಮತ್ತು ಒಂಭತ್ತು ಮಂದಿ ಹೆಣ್ಣು ಮಕ್ಕಳು ಪದವೀಧರರಾಗಿದ್ದಾರೆ. ಯಾರು ಕೂಡ ಸರ್ಕಾರಿ ಕೆಲಸವನ್ನು ನಂಬಿಕೊಳ್ಳದೆ ಕೃಷಿಯಲ್ಲಿ ಜೀವನ ರೂಪಿಸಿಕೊಂಡಿದ್ದಾರೆ. ಪುಟ್ಟಯ್ಯ ಅವರಿಗೆ ತಾತ ಮುತ್ತಾತರ ಕಾಲದಿಂದಲೂ ಕೃಷಿಯೇ ಬದುಕು. ಖುಷ್ಕಿ ಮತ್ತು ನೀರಾವರಿ ಜಮೀನಿನಲ್ಲಿ ದೇಶಿ ಪದ್ಧತಿಯನ್ನು ಅನುಸರಿಸಿ ಹೊಸ ಹೊಸ ಪ್ರಯೋಗಗಳನ್ನು ಮಾಡುವ ಮೂಲಕ ಕೃಷಿಯಲ್ಲಿ ಯಶಸ್ಸು ಸಾಧಿಸಿದವರು. ನಾಲ್ಕು ಎಕರೆ ಜಮೀನಿನಿಂದ ಹಂತ ಹಂತವಾಗಿ ಐವತ್ತು ಎಕರೆ ಜಮೀನಿನಲ್ಲಿ ರಾಗಿ, ಜೋಳ, ತೆಂಗು, ಕಬ್ಬು, ಅರಿಶಿಣ, ಬಾಳೆ, ದಪ್ಪ ಮೆಣಸಿನಕಾಯಿ, ಟೊಮೊಟೊ, ಬೀನ್ಸ್ ಸೇರಿದಂತೆ ತರಕಾರಿ ಸೊಪ್ಪು, ಬಾಳೆ, ಮುಸುಕಿನ ಜೋಳ, ಅಲಸಂದೆ, ಅವರೆ, ತೊಗರಿ, ಸಪೋಟ, ನೇರಳೆ, ಹತ್ತಿ, ನೆಲಗಡಲೆ ಬೆಳೆಗಳನ್ನು ಬೆಳೆಯುತ್ತಾರೆ. ಈ ಬೆಳೆಗಳನ್ನು ಸಾವಯವ ಪದ್ಧತಿಯಿಂದ ಬೆಳೆಯುತ್ತಾರೆ ಎನ್ನುವುದು ಒಂದು ಹೆಗ್ಗಳಿಕೆ. ಮೀನು ಮತ್ತು ಕೋಳಿಗಳನ್ನು ಸಾಕಿದ್ದಾರೆ. ಇಷ್ಟೇ ಅಲ್ಲದೆ ಐದು ಹಸು, ಇನ್ನೂರು ಕುರಿ, ಐವತ್ತು ಮೇಕೆ, ಎಂಟು ಜೊತೆ ಎತ್ತುಗಳಿವೆ. ಈ ಎತ್ತುಗಳಿಂದ ಬಹುತೇಕ ಕೃಷಿ ಕೆಲಸವನ್ನು ಮಾಡುತ್ತಾರೆ. ತುರ್ತು ಸಂದರ್ಭದಲ್ಲಿ ಮಾತ್ರ ಟ್ರ್ಯಾಕ್ಟರ್ ಅನ್ನು ಬಳಸಿಕೊಳ್ಳುತ್ತಿದ್ದಾರೆ. ಐದು ವರ್ಷಗಳಿಗಾಗುವಷ್ಟು ನೂರು ಟ್ರ್ಯಾಕ್ಟರ್ ಗೊಬ್ಬರವನ್ನು ಸಂಗ್ರಹಿಸಿಟ್ಟಿದ್ದಾರೆ. ಒಟ್ಟಾರೆ ಪುಟ್ಟಯ್ಯ ಅವರು

ಕೃಷಿ, ಹೈನುಗಾರಿಕೆ, ಮೀನುಗಾರಿಕೆ, ಕೋಳಿ ಸಾಕಾಣಿಕೆ ಮಾಡಿ ಸಮಗ್ರ ಬೇಸಾಯ ಪದ್ಧತಿಯನ್ನು ಅಳವಡಿಸಿಕೊಂಡು ವಾರ್ಷಿಕವಾಗಿ ಇಪ್ಪತ್ತೈದರಿಂದ ಮೂವತ್ತು ಲಕ್ಷ ಆದಾಯವನ್ನು ಗಳಿಸುತ್ತಿದ್ದಾರೆ. ನೈಸರ್ಗಿಕವಾಗಿ ಬೆಳೆದ ಹಲವಾರು ಮರಗಳೊಂದಿಗೆ ಕೆಲವು ಬಹುಮುಖ್ಯವಾದ ಗಿಡಗಳನ್ನು ಬೆಳೆಸಿ ನಾಲ್ಕು ಎಕರೆಯಲ್ಲಿ ಸಾಮಾಜಿಕ ಅರಣ್ಯವನ್ನು ನಿರ್ಮಿಸಿ ಒಬ್ಬ ದೂರದೃಷ್ಟಿಯುಳ್ಳ ಪ್ರಗತಿಪರ ರೈತ ಎನಿಸಿಕೊಂಡಿದ್ದಾರೆ.

ಮಳೆಯಾಶ್ರಿತ ಮತ್ತು ಎಂಟು ಕೊಳವೆ ಬಾವಿ ನೀರಾವರಿಯ ಮೂಲಕ ಇವರು ಹಲವಾರು ಬೆಳೆಗಳನ್ನು ಬೆಳೆದು ಆದಾಯವನ್ನು ವೃದ್ಧಿಸಿಕೊಂಡಿದ್ದಾರೆ. ಡೇರಿ ಆರಂಭಿಸಿರುವುದರಿಂದ ನಿತ್ಯವು ಆದಾಯ ಬರುತ್ತದೆ. ತರಕಾರಿ ಬೆಳೆಯುವುದರಿಂದ ಎಂಟು ದಿನಕ್ಕೊಮ್ಮೆ, ರೇಷ್ಮೆ ಕೃಷಿಯಿಂದ ತಿಂಗಳಿಗೊಮ್ಮೆ, ತೆಂಗಿನಿಂದ ಮೂರು ತಿಂಗಳಿಗೊಮ್ಮೆ, ದ್ವಿದಳ ಧಾನ್ಯ ಎಣ್ಣೆ ಕಾಳುಗಳಿಂದ ಆರು ತಿಂಗಳಿಗೊಮ್ಮೆ, ಕಬ್ಬು, ಶುಂಠಿ, ಅರಿಶಿಣ, ಬಾಳೆಯಿಂದ ವರ್ಷಕ್ಕೊಮ್ಮೆ ವಿವಿಧ ರೀತಿಯ ಸಮಯದಲ್ಲಿ ಆದಾಯ ತರುವ ತಂತ್ರಗಾರಿಕೆ ಇವರಿಗಿದೆ. ಕುರಿ–ಮೇಕೆ ಯಿಂದ ವರ್ಷಕ್ಕೆ ಐದಾರು ಲಕ್ಷ ಆದಾಯ ಬರುತ್ತದೆ. ಇಂತಹ ವೈಜ್ಞಾನಿಕ ಪದ್ಧತಿಯಲ್ಲೇ ಒಂದೇ ರೀತಿಯ ಬೆಳೆಗಳನ್ನು ಸಹ ವಿವಿಧ ಕಾಲದಲ್ಲಿ ಬೆಳೆದು ಬೆಲೆಯ ಏರಿಳಿತಗಳಿಂದಾಗುವ ನಷ್ಟದಿಂದ ಪಾರಾಗಿ ಲಾಭವನ್ನು ಪಡೆಯುವ ಮಾರ್ಗೋಪಾಯವನ್ನು ಹೊಂದಿದ್ದಾರೆ. ಕಬ್ಬು ಮತ್ತು ಬಾಳೆ ಎಂದು ಒಂದೊಂದು ಬೆಳೆಗೆ ಅವಲಂಬಿತರಾಗಿ ಕೃಷಿ ಮಾಡಿ ಕೈ ಸುಟ್ಟುಕೊಂಡು ಆತ್ಮಹತ್ಯೆ ದಾರಿ ಹಿಡಿಯುವವರ ನಡುವೆ ಪುಟ್ಟಯ್ಯ ಅವರು ಆರ್ಥಿಕತಜ್ಞ ರೈತರಾಗಿ ಸ್ವಾಭಿಮಾನಿ ಎನಿಸಿಕೊಂಡಿದ್ದಾರೆ.

ಬಹುತೇಕ ಹಳ್ಳಿಗಳಲ್ಲಿ ರೈತರು ದವಸ ಧಾನ್ಯಗಳನ್ನು ಒಕ್ಕಣೆ ಮಾಡಲು ರಸ್ತೆಗಳಿಗೆ ಬರುತ್ತಾರೆ. ಇದರಿಂದ ಎಷ್ಟೋ ವೇಳೆ ರಸ್ತೆ ಅಪಘಾತವಾಗಿ ಪ್ರಾಣಹಾನಿಯಾಗಿ ಒಕ್ಕಣೆಯ ದವಸ ಧಾನ್ಯಗಳು ಸಹ ಬೆಂಕಿಗಾಹುತಿಯಾಗಿದೆ. ಆದರೆ ಪುಟ್ಟಯ್ಯ ಅವರು ತಮ್ಮ ಕೃಷಿ ಜಮೀನಿನಲ್ಲಿ ಕಣವನ್ನು ನಿರ್ಮಿಸಿಕೊಂಡಿದ್ದಾರೆ. ಭತ್ತ, ರಾಗಿ, ಜೋಳ, ತೊಗರಿ, ಅಲಸಂದೆ, ಅವರೆ, ಹುರುಳಿ, ನೆಲಗಡಲೆ ಮುಂತಾದವುಗಳನ್ನು ಕಣದಲ್ಲಿ ಒಕ್ಕಣೆ ಮಾಡುತ್ತಾರೆ. ಸರ್ಕಾರದ ಯೋಜನೆಗಳನ್ನು ದುರ್ಬಳಕೆ ಮಾಡಿಕೊಳ್ಳದೆ ಸದ್ಬಳಕೆ ಮಾಡಿಕೊಂಡು ಯಶಸ್ವಿ ರೈತರಾಗಿದ್ದಾರೆ. ಯಾವ ಬ್ಯಾಂಕಿನಿಂದಲೂ ಒಂದೇ ಒಂದು ರೂಪಾಯಿಯನ್ನು ಸಹ ಪಡೆದಿಲ್ಲ. ಕೃಷಿಗೆ ಹಣವನ್ನು ಹಾಕಿ ಕೃಷಿಯಿಂದ ಬಂದ ಹಣವನ್ನು ಮತ್ತೆ ಕೃಷಿ ಕ್ಷೇತ್ರ ಅಭಿವೃದ್ಧಿಪಡಿಸಿ ವಿಸ್ತರಿಸುತ್ತಾ ಮುಂದುವರೆಯುತ್ತಿದ್ದಾರೆ. ಇವೆಲ್ಲಾ ಸಾಕಾರಗೊಳ್ಳುತ್ತಿರುವುದು ಜೇನುಗೂಡಿನಂತಿರುವ ಅವರ ಅವಿಭಕ್ತ ಕುಟುಂಬದಿಂದ ಎನ್ನುವುದು ವಿಶೇಷವಾದುದು. ಎಲ್ಲರೂ ಕೂಡ ಒಟ್ಟಾಗಿ ಶಿಕ್ಷಿತ–ಅಶಿಕ್ಷಿತ ಎನ್ನದೆ, ಹೆಣ್ಣು–ಗಂಡೆಂಬ ಭೇದ–

ಭಾವವಿಲ್ಲದೆ ಒಗ್ಗಟ್ಟಾಗಿ ಕೃಷಿ ಕಾಯಕದಲ್ಲಿ ತೊಡಗಿಸಿಕೊಳ್ಳುತ್ತಾರೆ. ಪುಟ್ಟಯ್ಯ ಅವರ ಪಾರದರ್ಶಕ ಹಣಕಾಸು ನೀತಿ ಇದಕ್ಕೆ ಒತ್ತಾಸೆಯಾಗಿದೆ ಎಂದರೆ ತಪ್ಪಾಗಲಾರದು. ಕೃಷಿಯಿಂದಲೇ ಎಲ್ಲವನ್ನೂ ಸಾಧಿಸಬಹುದು, ಎಲ್ಲವನ್ನು ಪಡೆಯಬಹುದು ಎಂಬುದಕ್ಕೆ ಪುಟ್ಟಯ್ಯನವರೇ ಸಾಕ್ಷಿ. ಜೀರಿಗೆ, ಮೆಣಸು, ಏಲಕ್ಕಿ, ಚಕ್ಕೆ, ಲವಂಗ ಇವುಗಳನ್ನು ತಮ್ಮ ಕೃಷಿ ಜಮೀನಿನಲ್ಲಿ ಬೆಳೆಯದ ಕಾರಣ ಮತ್ತು ಉಪ್ಪು, ಸೋಪು, ಟೀ ಪುಡಿಗಳನ್ನು ತಾವೇ ತಯಾರಿಸಿಕೊಳ್ಳಲು ಆಗದ ಕಾರಣ ಈ ವಸ್ತುಗಳನ್ನು ಅಂಗಡಿಗಳಿಂದ ಕೊಂಡುಕೊಳ್ಳುತ್ತಾರೆ. ತಮ್ಮ ಆಹಾರಕ್ಕೆ ಮತ್ತು ಜೀವನೋಪಾಯಕ್ಕೆ ಬೇಕಾದಂತಹ ಬಹುತೇಕ ವಸ್ತುಗಳನ್ನು ತಾವೇ ಸಿದ್ಧಪಡಿಸಿಕೊಳ್ಳುತ್ತಾರೆ.

ಇವರ ಕೃಷಿ ಸಾಧನೆಗಾಗಿ ೨೦೧೫-೧೬ನೇ ಸಾಲಿನಲ್ಲಿ ಕರ್ನಾಟಕ ರಾಜ್ಯ ಸರ್ಕಾರ ಕೊಡಮಾಡುವ ಕೃಷಿ ಪಂಡಿತ ಪ್ರಶಸ್ತಿ ಸಂದಿದೆ. ೨೦೧೫ನೇ ಸಾಲಿನಲ್ಲಿ ನಾಡಹಬ್ಬ ದಸರಾ ಉದ್ಘಾಟನೆಗಾಗಿ ಪ್ರಗತಿಪರ ರೈತರನ್ನು ಆಯ್ಕೆ ಮಾಡುವಾಗ ೫೮ ಜನ ರೈತರಲ್ಲಿ ಮಲಾರ ಕಾಲೋನಿ ಗ್ರಾಮದ ಪುಟ್ಟಯ್ಯನವರು ಮಾತ್ರ ಆಯ್ಕೆಯಾಗಿ ಊರಿಗೆ ಹೆಮ್ಮೆ ತಂದಿದ್ದಾರೆ. ಪಾರಂಪರಿಕ ಸಾವಯವ ಕೃಷಿ ಪದ್ಧತಿ, ಅವಿಭಕ್ತ ಕುಟುಂಬ, ಸಾಲವಿಲ್ಲದ ರೈತ ಎಂಬ ಮೂರು ಕಾರಣಗಳಿಗಾಗಿ ಪುಟ್ಟಯ್ಯರವರನ್ನು ಆಯ್ಕೆ ಮಾಡಿರುವುದು ಕೂಡಾ ಶ್ಲಾಘನೀಯವಾದುದು. ಪ್ರತಿವರ್ಷವು ಕೃಷಿ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ಇವರ ಕೃಷಿ ಕ್ಷೇತ್ರಕ್ಕೆ ಬಂದು ಮಾರ್ಗದರ್ಶನ ಪಡೆಯುತ್ತಾರೆ. ಜಿಲ್ಲಾ ಕೃಷಿ ಇಲಾಖೆಯಲ್ಲಿ ತಾಲ್ಲೂಕು ಕೃಷಿ ಇಲಾಖೆಯಲ್ಲಿ ರೈತರೊಂದಿಗೆ ಸಂವಾದ ನಡೆಸಿ ಸರಿಯಾದ ಸಲಹೆ ಸೂಚನೆಗಳನ್ನು ನೀಡುತ್ತಾರೆ. ಹಲವಾರು ಸಂಘ ಸಂಸ್ಥೆಗಳನ್ನು ಅಧ್ಯಕ್ಷರಾಗಿ, ಸದಸ್ಯರಾಗಿ ಸಂಪನ್ಮೂಲ ವ್ಯಕ್ತಿಯಾಗಿದ್ದಾರೆ. ಒಮ್ಮೆ ಮಂಡಲ ಪಮ್ಚಾಯಿತಿಯ ಅಧ್ಯಕ್ಷರಾಗಿ ಗ್ರಾಮಕ್ಕೆ ಅಭಿವೃದ್ಧಿ ಕೆಲಸ ಮಾಡಿದ್ದಾರೆ. ೧. ಬೆಳೆಗೆ ಸರ್ಕಾರ ವೈಜ್ಞಾನಿಕ ದರ ನಿಗದಿ ಮಾಡಬೇಕು. ೨. ಕೇಂದ್ರ / ರಾಜ್ಯ ಸರ್ಕಾರದಿಂದ ಸಕಾಲಕ್ಕೆ ಬೆಳೆ ಮಾರ್ಗದರ್ಶನ ದೊರಕಬೇಕು. ೩. ಎಲ್ಲಾ ಕೃಷಿ ಪಂಪ್‌ಸೆಟ್‌ಗೆ ಸರ್ಕಾರ ಸೌರವಿದ್ಯುತ್ ಸಂಪರ್ಕ ಕಲ್ಪಿಸಬೇಕು. ೪. ಸಾಮೂಹಿಕ ಕಣ ನಿರ್ಮಿಸುವ ಮೂಲಕ ಸಾಮೂಹಿಕ ಒಕ್ಕಣೆಗೆ ಸರ್ಕಾರ ಅನುಕೂಲ ಮಾಡಿಕೊಡಬೇಕು. ೫. ರೈತರು ಸಮಗ್ರ ಕೃಷಿ ಪದ್ಧತಿಯನ್ನು ಅಳವಡಿಸಿಕೊಳ್ಳಬೇಕು. ೬. ರೈತರು ಆತ್ಮಹತ್ಯೆ ಕೈಬಿಟ್ಟು ಸರಿಯಾದ ಕೃಷಿ ಮಾರ್ಗೋಪಾಯಗಳನ್ನು ಕಂಡುಕೊಳ್ಳಬೇಕು ಎಂಬ ಸೂಕ್ತವಾದ ಸಲಹೆಗಳನ್ನು ಸರ್ಕಾರ ಮತ್ತು ರೈತರ ಮುಂದಿಡುತ್ತಾರೆ. ಛಲ-ಗುರಿ-ಶ್ರದ್ಧೆ-ಶ್ರಮದಿಂದ ಪುಟ್ಟಯ್ಯ ಅವರು ಕೃಷಿಯಲ್ಲೇ ಸಾಕ್ಷಾತ್ಕಾರವನ್ನು ಕಂಡಿದ್ದಾರೆ. ಇವರ ಕೃಷಿ ಸಂಸ್ಕೃತಿ ನಾಡಿನಲ್ಲಿ ಒಂದು ಮೈಲಿಗಲ್ಲಾಗಿದೆ.

## ಪರಾಮರ್ಶನ ಗ್ರಂಥಗಳು


೧. ಚಿನ್ನಸ್ವಾಮಿ ವಡ್ಡಗೆರೆ – ಕೃಷಿ ಸಂಸ್ಕೃತಿ ಸಂಕಥನ, ಚಿಂತನ ಚಿತ್ತಾರ ಪ್ರಕಾಶನ, ಮೈಸೂರು, ಮುದ್ರಣ ೧೯೬೯.

೨. ನಾಯ್ಡು ಜಿ.ವಿ.ಬಿ. – ವ್ಯವಸಾಯ ಕೈಪಿಡಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ಮುದ್ರಣ ೧೯೭೨.

೩. ಪ್ರಸನ್ನ ಕುಮಾರ್ ಅಂಶಿ – ಅನ್ನದಾತರ ಆತ್ಮಕಥೆ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮುದ್ರಣ ೨೦೧೪.

೪. ಮಂಜು ಎಚ್. – ಮಂಡ್ಯ ತಾಲ್ಲೂಕಿನ ಪಾರಂಪರಿಕ ಕೃಷಿ ತಂತ್ರಜ್ಞಾನ, ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ಮುದ್ರಣ ೨೦೧೨.

೫. ರಮೇಶ್ ಸ.ಚಿ. – ಕೃಷಿ ಪಾರಂಪರಿಕ ಜ್ಞಾನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಮುದ್ರಣ ೨೦೧೧.

೬. ರಾಜೇಗೌಡ ಹ.ಕ. – ಕರ್ನಾಟಕ ವ್ಯವಸಾಯ ಉಪಕರಣಗಳು, ಐಬಿಹೆಚ್ ಪ್ರಕಾಶನ, ಬೆಂಗಳೂರು, ಮುದ್ರಣ ೧೯೮೦.

೭. ರಾಮಚಂದ್ರಪ್ಪ ಎಸ್.ಟಿ. – ಸಾವಯವ ತೇರ ಎಳೆಯೋಣ ಬಾ, ಜನಸ್ಪಂದನ ಡೆವಲಪ್‌ಮೆಂಟ್ ಸೊಸೈಟಿ, ಚಿಕ್ಕಮಗಳೂರು, ಮುದ್ರಣ ೨೦೧೨.

೮. ವೀರಭದ್ರಪ್ಪ ಬಿಸ್ಲಳ್ಳಿ – ಕೃಷಿ ಕ್ಷೇತ್ರದ ಹೊಸ ಸಂಕಟಗಳು, ಅಭಿರುಚಿ ಪ್ರಕಾಶನ, ಮೈಸೂರು, ಮುದ್ರಣ ೨೦೧೮.

೯. ವೆಂಕಟರಾವ್ ಡಿ. – ಕೃಷಿ ಬೆಳವಣಿಗೆ, ವಿದ್ಯಾನಿಧಿ ಪ್ರಕಾಶನ, ಗದಗ, ಮುದ್ರಣ ೧೯೮೫.

೧೦. ಶಿವಶಂಕರ ಚಕ್ಕರೆ – ಜನಪದ ತಂತ್ರಜ್ಞಾನ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಕನ್ನಡ ಭವನ, ಬೆಂಗಳೂರು, ಮುದ್ರಣ ೨೦೦೩.

೧೧. ಸ್ವಾಮಿ ಆನಂದ್ – ನೈಸರ್ಗಿಕ ಕೃಷಿ, ಅಗ್ನಿ ಪ್ರಕಾಶನ, ಬೆಂಗಳೂರು, ಮುದ್ರಣ ೨೦೦೫.